**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.278/2021

**PW**. 2

**CW**. 3

**ಸಾಕ್ಷಿಯ ಹೆಸರು –ನಟರಾಜ**

**ತಂದೆಯ ಹೆಸರು –ಈರಯ್ಯ**

**ವಯಸ್ಸು –38 ವರ್ಷಗಳು**

ದಿನಾಂಕ 06–12–2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ –ಚಿಕ್ಕಬೆಳಾಲು, ಪಿರಿಯಾಪಟ್ಟಣ ತಾಃ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–1 ನನ್ನ ತಂದೆ. ಚಾಸಾ–2 ನನ್ನ ದೊಡ್ಡಪ್ಪ ಅವರಿಗೆ ವಯಸ್ಸಾದ ಕಾರಣ ಓಡಾಡಲು ಆಗುವುದಿಲ್ಲ. ಚಾಸಾ–4 ನನ್ನ ಹೆಂಡತಿ. ಚಾಸಾ–5 ನಮ್ಮ ಊರಿನವರು. ಆರೋಪಿತರು ನನಗೆ ಗೊತ್ತು. 3 ನೇ ಆರೋಪಿ ದೊಡ್ಡಬೆಳಾಲು ಗ್ರಾಮದ ಪಂಚಾಯಿತಿ ಸದಸ್ಯನಾಗಿದ್ದ. 1 ಮತ್ತು 2 ನೇ ಆರೋಪಿತರು 3 ನೇ ಆರೋಪಿಯ ಮಕ್ಕಳು. ನಮ್ಮ ಹಿಂದೆ ಇದ್ದ 30 x 40 ಜಾಗಕ್ಕೆ ಸಂಬಂಧಸಿದಂತೆ ಆರೋಪಿತರು ನಮ್ಮ ಜೊತೆ ಜಗಳ ಮಾಡುತ್ತಿದ್ದರು. ಆ ಬಗ್ಗೆ ನಮ್ಮ ಊರಿನಲ್ಲಿ ಪಂಚಾಯಿತಿ ಮಾಡಿದ್ದೆವು. ನಮ್ಮ ಊರಿನ ಮುಖಂಡರು ಆರೋಪಿತರಿಗೆ ಕರೆಸಿ ಗಾಲಟೆ ಮಾಡಬಾರದೆಂದು ಬುದ್ಧಿವಾದ ಹೇಳಿದ್ದರು. ನಮ್ಮ ಹಿಂದೆ ಇದ್ದ ಜಾಗಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳು ಚಾಸಾ–2 ರವರ ಹೆಸರಿಗೆ ಇವೆ. ಆದರೂ ಕೂಡ ಆ ಜಾಗದ ವಿಚಾರದಲ್ಲಿ ಆರೋಪಿತರು ಆಗಾಗ್ಗೆ ಗಲಾಟೆ ಮಾಡುತ್ತಿದ್ದರು. ಆಗಿನಿಂದ ನಮಗೂ ಅವರಿಗೂ ಮಾತು ಇರಲಿಲ್ಲ.

ದಿಃ 12-11-2019 ರಂದು ಸಂಜೆ 7.00 ಗಂಟೆ ಸಮಯದಲ್ಲಿ ನನ್ನ ತಂದೆ ನಮ್ಮ ಮನೆಯಲ್ಲಿ ಇರುವಾಗ, ನನ್ನ ತಂದೆಯನ್ನು ಉದ್ದೇಶಿಸಿ 1 ನೇ ಆರೋಪಿ ಅವಾಚ್ಯ ಶಬ್ದಗಳಿಂದ ಬೈದು , ನಿಮ್ಮನ್ನು ಕೊಲೆ ಮಾಡುತ್ತೇನೆಂದು ಬೆದರಿಕೆ ಹಾಕುತ್ತಿದ್ದ. ಆಗ ಪಕ್ಕದಲ್ಲಿದ್ದ ಚಾಸಾ-2 ಏಕೆ ಗಲಾಟೆ ಮಾಡುತ್ತಿದ್ದೀರಾ ಎಂದು ಕೇಳಿದರು. ಅದೇ ಸಮಯಕ್ಕೆ ಕೂಲಿ ಕೆಲಸದವರಿಗೆ ಕೂಲಿ ಕೊಟ್ಟು ನಾನು ನಮ್ಮ ಮನೆಯ ಬಳಿ ಬಂದೆ. ಆರೋಪಿತರು ಬೈಯುತ್ತಿದ್ದಾಗ, ನನ್ನ ತಂದೆ ಮನೆಯಿಂದ ಹೊರ ಬಂದು ಚಾಸಾ-2 ರವರನ್ನು ಮನೆ ಒಳಗಡೆ ಕರೆದರು. ಆಗ 1 ನೇ ಆರೋಪಿ ನನಗೆ ಕುಯಗತ್ತಿ ಯಿಂದ ತಲೆಗೆ ಹೊಡೆದನು. ಆಗ ನಾನು ಕೆಳಗೆ ಬಿದ್ದು ಪ್ರಜ್ಞೆ ತಪ್ಪಿದೆ.

ಆನಂತರ ನನ್ನ ತಂದೆ ಆ್ಯಂಬುಲೆನ್ಸಗೆ ಕರೆಸಿ ನಾವೆಲ್ಲರೂ ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋದೆವು. ಚಾಸಾ-2 ಹಾಗೂ ನನಗೆ ಹೆಚ್ಚಿನ ಪೆಟ್ಟಾಗಿದ್ದ ಕಾರಣ ಮೈಸೂರಿನ ಬೃಂದಾವನ ಆಸ್ಪತ್ರೆಗೆ ಚಿಕಿತ್ಸೆ ಪಡೆದ್ದೇವೆ. ನಾನು ಬೃಂದಾವನ ಆಸ್ಪತ್ರೆಯಲ್ಲಿ 2 ತಿಂಗಳು ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ಪುನಃ ಶಸ್ತ್ರ ಚಿಕಿತ್ಸೆಗೆಂದು 8 ದಿನಗಳ ಕಾಲ ಆಸ್ಪತ್ರೆಯಲ್ಲಿ ಇದ್ದು , ಒಟ್ಟು 3 ತಿಂಗಳ ಕಾಲ ಚಿಕಿತ್ಸೆ ಪಡೆದಿರುತ್ತೇನೆ. ಚಾಸಾ-2 ನನ್ನ ದೊಡ್ಡಪ್ಪ 1 ವಾರ ಬೃಂದಾವನ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ನಮ್ಮ ಎಲ್ಲರ ಚಿಕಿತ್ಸೆಗಾಗಿ ನನ್ನ ತಂದೆ ಇಲ್ಲಿಯವರೆಗೆ 20 ಲಕ್ಷ ಖರ್ಚು ಮಾಡಿದ್ದು, ನಾನು ಈಗಲೂ ಚಿಕಿತ್ಸೆ ಪಡೆಯುತ್ತಿದ್ದು , ಈಗಲೂ ಔಷಧಿ ಮಾತ್ರೆ ಪಡೆಯುತ್ತಿದ್ದು, ಪ್ರತಿ ತಿಂಗಳಿಗೆ ನನ್ನ ಔಷಧಿ ಖರ್ಚಿಗೆ 5-6 ಸಾವಿರ ರೂ ಬೇಕಾಗುತ್ತದೆ. 3 ತಿಂಗಳಿಗೊಮ್ಮೆ ವೈದ್ಯರಿಗೆ ತೋರಿಸುತ್ತೇನೆ. ಆ ಬಗ್ಗೆ ನಮ್ಮ ಹತ್ತಿರ ದಾಖಲೆಗಳು ಇವೆ.

1 ನೇ ಆರೋಪಿ ನನಗೆ ಕುಯಗತ್ತಿಯಿಂದದ ಹೊಡೆದಿದ್ದರಿಂದ ತಲೆಗೆ ಪೆಟ್ಟಾಗಿ ಶಸ್ತ್ರ ಚಿಕಿತ್ಸೆ ಮಾಡಿ ,ಚಿಪ್ ಅನ್ನು ಅಳವಡಿಸಿದ್ದಾರೆ. (ಸಾಕ್ಷಿಯನ್ನು ನೋಡಲಾಗಿ ಹಣೆಯ ಎರಡು ಭಾಗದಲ್ಲಿ ತಗ್ಗು ಬಿದ್ದಿದ್ದು , ಮೇಲ್ನೊಟಕ್ಕೆ ಕಂಡುಬರುತ್ತದೆ).

**ಪಾಟೀಸವಾಲುಃ- ಆರೋಪಿತರ ಪರ ಶ್ರೀ ವೈ ಜಿ ವಕೀಲರಿಂದಃ-**

3 ನೇ ಆರೋಪಿ ಕಳೆದ ಬಾರಿ ನಮ್ಮ ಊರಿನ ಪಂಚಾಯಿತಿ ಸದಸ್ಯರಾಗಿದ್ದ ಎಂದರೆ ಸರಿ. ಸದರಿ ಚುನಾವಣೆಯಲ್ಲಿ ಬಸವರಾಜು ಮತ್ತು ಮಹದೇವ ಎನ್ನುವವರು 3 ನೇ ಆರೋಪಿ ವಿರುದ್ಧ ಸ್ಪರ್ಧೆ ಮಾಡಿದ್ದರು ಎಂದರೆ ಸರಿ. ಸದರಿ ಚುನಾವಣೆಯಲ್ಲಿ ನಾವು ಬಸವರಾಜು ಪರವಾಗಿ ಕೆಲಸ ಮಾಡಿದ್ದೇವು ಎಂದರೆ ಸರಿ. ಚುನಾವಣೆ ಸಮಯದಲ್ಲಿ ನಮಗೂ ಆರೋಪಿತರಿಗೂ ವೈಮನಸ್ಸು ಇತ್ತು ಎಂದರೆ ಸರಿ. ನಮ್ಮ ಮನೆಯ ಮುಂದೆ ಪೂರ್ವ ಪಶ್ಚಿಮವಾಗಿ ರಸ್ತೆ ಇದೆ ಎಂದರೆ ಸರಿ. ನಮ್ಮ ಮನೆಯ ನಂತರ ಪೂರ್ವದಿಂದ ಪಶ್ಚಿಮಕ್ಕೆ ಹೋಗುವಾಗ ಆರೋಪಿತರ ಮನೆ ಸಿಗುತ್ತದೆ ಎಂದರೆ ಸರಿ. ನಮ್ಮ ಮನೆಯ ಮುಂದೆ ಇರುವ ರಸ್ತೆ ನೇರವಾಗಿ ಇಲ್ಲದೆ ಕಮಲಮ್ಮನ ಮನೆಯ ಹತ್ತಿರ ತಿರುವು ಪಡೆದಿದೆ ಎಂದರೆ ಸರಿ. ರಸ್ತೆಯನ್ನು ಅತಿಕ್ರಮಣ ಮಾಡಿ ನಾವು ಬ್ಯಾರೆನ್ ಕಟ್ಟಿರುವುದರಿಂದ ರಸ್ತೆ ತಿರುವು ಪಡೆದಿದೆ ಎಂದರೆ ಸರಿ. ಸದರಿ ತಿರುವುನಲ್ಲಿ ಟ್ರ್ಯಾಕ್ಟರ್ ಓಡಾಡಲು ಕಷ್ಟವಾಗುತ್ತದೆ ಎಂದರೆ ಸರಿಯಲ್ಲ. ತಿರುವುನ ನಂತರ ಆರೋಪಿತರಿಗೆ ಸೇರಿದ ಬ್ಯಾರೆನ್ ಮನೆ ಇದೆ ಎಂದರೆ ಸರಿ. ನಾವು ರಸ್ತೆಯನ್ನು ಅತಿಕ್ರಮಣ ಮಾಡಿರುವುದರಿಂದ ತಿರುಗಾಡಲು ತೊಂದರೆಯಾಗುತ್ತದೆ ಎಂದು 3 ನೇ ಆರೋಪಿ ನಮಗೆ ಪ್ರಶ್ನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಆರೋಪಿತರ ಟ್ರ್ಯಾಕ್ಟರ್ ಓಡಾಡಲು ನಾವು ಅಡ್ಡಿ ಮಾಡಿದ್ದೆವು ಎಂದರೆ ಸರಿಯಲ್ಲ. ನಮ್ಮ ಮನೆಯ ಬ್ಯಾರೆನ್ ಪಕ್ಕದಲ್ಲಿ ಸಣ್ಣತಮ್ಮಯ್ಯ , ಈರಯ್ಯ, ಮೂರ್ತಿ ಮತ್ತು ಮಹದೇವರವರ ಮನೆಗಳು ಇವೆ ಎಂದರೆ ಸರಿ .

ಸಾಮಾನ್ಯವಾಗಿ ಗಲಾಟೆಗಳಾದರೆ ಅಕ್ಕಪಕ್ಕದ ಮನೆಯವರಿಗೆ ಗೊತ್ತಾಗುತ್ತದೆ ಎಂದರೆ ಸರಿ. ನಮ್ಮ ಮನೆಯ ಅಕ್ಕಪಕ್ಕದಲ್ಲಿ ವಾಸದ ಮನೆಗಳು ಇವೆ ಎಂದರೆ ಸರಿ. ನಮ್ಮ ಬ್ಯಾರೆನ್ ಮನೆ ಮತ್ತು 3 ನೇ ಆರೋಪಿಗೆ ಸೇರಿದ ಬ್ಯಾರೆನ್ ಮನೆಗಳ ನಡುವೆ ಗ್ರಾಮ ಠಾಣಾ ಜಾಗ ಇದೆ ಎಂದರೆ ಸರಿ. ಸದರಿ ಗ್ರಾಮ ಠಾಣಾವನ್ನು ನಾವು ಮತ್ತು ಆರೋಪಿತರು ಉಪಯೋಗಿಸುತ್ತಿದ್ದಾರೆ ಎಂದರೆ

ಸರಿಯಲ್ಲ. ಸಾಕ್ಷಿಯು ಮುಂದುವರಿದ ಪೂರ್ತಿ ನಾವೇ ಅನುಭೋಗ ಮಾಡುತ್ತಿದ್ದು, ನಮ್ಮ ಜಾಗದಲ್ಲಿ ದಾರಿ ಬಿಟ್ಟಿದ್ದೆವೆ ಎಂದು ಹೇಳುತ್ತಾರೆ. ಸದರಿ ಗ್ರಾಮ ಠಾಣಾ ಜಾಗದ ಖಾತೆ ಯಾರ ಹೆಸರಿನಲ್ಲೂ ಇಲ್ಲ ಎಂದರೆ ಸರಿ .

ಗ್ರಾಮ ಠಾಣಾ ಜಾಗವನ್ನು ನಮ್ಮ ಹೆಸರಿಗೆ ಖಾತೆ ಮಾಡಿಕೊಡಿ ಎಂದು 3 ನೇ ಆರೋಪಿಗೆ ಒತ್ತಡ ಹಾಕುತ್ತಿದ್ದೆವು ಎಂದರೆ ಸರಿಯಲ್ಲ. ಆ ಸಮಯದಲ್ಲಿ 3 ನೇ ಆರೋಪಿಯು ಸರ್ಕಾರಿ ಜಾಗವನ್ನು ಖಾತೆ ಮಾಡಿಕೊಡಲು ಆಗುವುದಿಲ್ಲ ಎಂದು ನಮಗೆ ಹೇಳಿದರು ಎಂದರೆ ಸರಿಯಲ್ಲ. ಆ ಕಾರಣಕ್ಕೆ ನಾವು 3 ನೇ ಆರೋಪಿಯೊಂದಿಗೆ ಜಗಳ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಸರ್ಕಾರಿ ಜಾಗವನ್ನು ನಮ್ಮ ಹೆಸರಿನಲ್ಲಿ ಖಾತೆ ಮಾಡಿ ಕೊಡದೇ ಇದ್ದರಿಂದ ನಾವು ಆರೋಪಿತರ ವಿರುದ್ಧ ವೈಮನಸ್ಸು ಇಟ್ಟುಕೊಂಡಿದ್ದೆವು ಎಂದರೆ ಸರಿಯಲ್ಲ.

ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ನಮ್ಮ ಜೊತೆ ಜಗಳ ಮಾಡಿಲ್ಲ ಮತ್ತು 1 ನೇ ಆರೋಪಿ ನನಗೆ ಕುಯಗತ್ತಿಯಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಬ್ಯಾರೆನ್ ಮನೆಯ ಮೇಲ್ಛಾವಣಿ ತುಂಬ ಎತ್ತರದಲ್ಲಿದೆ ಎಂದರೆ ಸರಿ. ಬ್ಯಾರೆನ್ ಮನೆಯಲ್ಲಿ ತಂಬಾಕು ಎಲೆಗಳನ್ನು ಒಣಗಿಸಲು ಕಬ್ಬಿಣ ರಾಡುಗಳು ಮತ್ತು ಉದ್ದದ ಮರದ ಕಡ್ಡಿಗಳನ್ನು 3 ಹಂತದಲ್ಲಿ ಅಳವಡಿಸಿರುತ್ತಾರೆ ಎಂದರೆ ಸರಿ. ನವೆಂಬರ್ ಸಮಯದಲ್ಲಿ ತಂಬಾಕು ಎಲೆಗಳನ್ನು ಹದ ಮಾಡುವ ಕಾಲ ಎಂದರೆ ಸರಿ. ನಮ್ಮ ಬ್ಯಾರೆನ್ ಮನೆಯಲ್ಲಿ ಅಳವಡಿಸಿದ್ದ ಕಬ್ಬಿಣದ ರಾಡು ಮತ್ತು ಮರದ ಕಡ್ಡಿಗಳು ಅತಿ ಭಾರದಿಂದ ನಮ್ಮ ಮೇಲೆ ಬಿದ್ದು, ನಾನು , ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪ ಗಾಯಗೊಂಡಿದ್ದೇವೆ ಎಂದರೆ ಸರಿಯಲ್ಲ.  ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ.

1 ನೇ ಆರೋಪಿಯು ನನ್ನ ತಲೆಗೆ ಕುಯಗತ್ತಿಯಿಂದ ಹೊಡೆದು ಗಾಯ ಮಾಡಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿ ಆನಂತರ ಸ್ಥಳಕ್ಕೆ ಬಂದು ಜಗಳ ಮಾಡಿ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿ. ನಾವು ಗಾಯಗೊಂಡ ಸಂದರ್ಭವನ್ನು ಉಪಯೋಗಿಕೊಂಡು ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಚಿಕಿತ್ಸೆಗಾಗಿ 20 ಲಕ್ಷಕ್ಕಿಂತ ಹೆಚ್ಚು ಖರ್ಚಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ನನ್ನ ಚಿಕಿತ್ಸೆಗಾಗಿ ತಿಂಗಳಿಗೆ 5-6 ಸಾವಿನ ಖರ್ಚು ಆಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ-1 ರಿಂದ 3 ರ ದೊಣ್ಣೆಗಳು ಹಾಗೂ ಮಚ್ಚು ನಮ್ಮ ಮನೆಯಲ್ಲಿ ಹಾಗೂ ಎಲ್ಲ ರೈತರ ಮನೆಯಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಮು.ಮಾ-1 ರಿಂದ 3 ನನ್ನ ತಂದೆ ಪೊಲೀಸರಿಗೆ ಕೋಟ್ಟಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಮನೆಯ ಅಕ್ಕಪಕ್ಕದ ನಿವಾಸಿಗಳು ನಮ್ಮ ಜೊತೆ ಚೆನ್ನಾಗಿದ್ದಾರೆ. ನನ್ನ ಹಣೆಯ ಎರಡು ಭಾಗದಲ್ಲಿ ಕಾಣುತ್ತಿರುವ ತಗ್ಗುಗಳು ನಾನು ಹುಟ್ಟಿದಾಗಿನಿಂದ ಇವೆ ಎಂದರೆ ಸರಿಯಲ್ಲ. ಆರೋಪಿತರು ಹೊಡೆದಿದ್ದರಿಂದ ನನ್ನ ಹಣೆಗೆ ತಗ್ಗು ಬಿದ್ದಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಖಾಲಿ ಜಾಗವನ್ನು ನಮ್ಮ ಹೆಸರಿಗೆ ಖಾತೆ ಮಾಡಿ ಕೊಡದೇ ಇದ್ದ ಕಾರಣ ನಾವು ಆರೋಪಿತರಿಗೆ ತೊಂದರೆ ಕೊಡಲು ಅವರ ವಿರುದ್ಧ ನನ್ನ ತಂದೆ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.